MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - TUESDAY 8-2-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶ್ಯನ್ ಪಾಮೆಣ್ಣೆ ಫ್ಯೂಚರ್ ದರ ಇಳಿಕೆ

ದಾಖಲೆ ಹೆಚ್ಚಳ ಕಂಡಿದ್ದ ಮಲೇಶ್ಯನ್ ಪಾಮೆಣ್ಣೆ ದರ ನಿನ್ನೆ ಹಾಗೂ ಇಂದು ಸತತ ಇಳಿಕೆ ಕಂಡಿದೆ. ಪರ್ಯಾಯ ಖಾದ್ಯತೈಲಗಳ ಬೆಲೆ ದುರ್ಬಲ, ಇಂಡೋನೇಶಿಯಾ 31,000 ಟನ್ ಕಚ್ಚಾ ಪಾಮೆಣ್ಣೆ ರಫ್ತಿಗೆ ಪರವಾನಗಿ ನೀಡಿರುವುದು ಹಾಗೂ ಮಲೇಶ್ಯನ್ ಪಾಮೆಣ್ಣೆ ದಾಸ್ತಾನು ಸ್ಥಿರವಾಗಿರುವುದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಜನವರಿಯಿಂದ ಮಲೇಶ್ಯನ್ ಪಾಮೆಣ್ಣೆ ಉತ್ಪಾದನೆ ಹಾಗೂ ರಫ್ತು ಇಳಿಕೆಯಾಗಿತ್ತೆನ್ನಲಾಗಿದೆ. ಫೆಬ್ರವರಿಯಲ್ಲೂ ಉತ್ಪಾದನೆ ಇಳಿಕೆಯಾಗಬಹುದಾದರೂ ಮಾರ್ಚ ತಿಂಗಳಲ್ಲಿ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ರಫ್ತು ಇಳಿಕೆಯಾದಲ್ಲಿ ದರವೂ ಇಳಿಕೆಯಾಗುವ ಸಾಧ್ಯತೆಯಿದೆ.

## ಉತ್ಪಾದನೆ ಇಳಿಕೆಯಿಂದ ಕೊತ್ತಂಬರಿ ದರ ಹೆಚ್ಚಳ

ಗುಜರಾತ್ ಮತ್ತು ರಾಜಸ್ಥಾನಗಳಲ್ಲಿ ಕೊತ್ತಂಬರಿ ಬಿತ್ತನೆ ಪ್ರದೇಶದ ಇಳಿಕೆ ಹಾಗೂ ಪ್ರತಿಕೂಲ ಹವಾಮಾನಗಳಿಂದ ಕೊತ್ತಂಬರಿ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದ್ದು, ಬೇಡಿಕೆ ಹೆಚ್ಚಿದ್ದುದರಿಂದ ದರ ಹೆಚ್ಚಳವಾಗಿದೆ. ಪ್ರಮುಖ ಉತ್ಪಾದಕ ರಾಜ್ಯಗಳಲ್ಲಿ ಉತ್ಪಾದನೆ ಇಳಿಕೆಯಿಂದ ದರ ಹೆಚ್ಚಳದಲ್ಲಿರುವ ಸಂಭವವಿದೆ.

## ಜೀರಿಗೆ ದರ ಹೆಚ್ಚಳ

ಪ್ರಮುಖ ಜೀರಿಗೆ ಉತ್ಪಾದಕ ರಾಜ್ಯಗಳಾದ ಗುಜರಾತ್ ಹಾಗೂ ರಾಜಸ್ಥಾನಗಳಲ್ಲಿ ಪ್ರತಿಕೂಲ ಹವಾಮಾನದಿಂದ ಬೆಳೆಹಾನಿಯಿಂದ ಉತ್ಪಾದನೆ ಇಳಿಕೆಯಾಗಿದೆಯೆನ್ನಲಾಗಿದೆ. ಪ್ರಬಲ ಬೇಡಿಕೆಯಿಂದ ದರಗಳೂ ಹೆಚ್ಚಳ ಕಂಡಿದೆ.